

ಅಂದಳು. ನಾವಿಬ್ಬರೂ ಸುಮ್ಮನೆ ಕುಳಿತಿದ್ದೆವು. ನಾನು ಏನಾರ ಅನಬಹುದು ಅಂತ ನನ್ನೇಣ್ತಿ ನನ್ನನ್ನೇ ನೋಡುತ್ತಿದ್ದಳು. ನನ್ನ ಮೌನ ಆಕೆಯ ಸಿಟ್ಟನ್ನು ಹೆಚ್ಚು ಮಾಡುತ್ತಿತ್ತು. ಮತ್ತೆ ಅಮ್ಮಾ ನಿಧಾನಕೆ 'ನಿನ್ನೇಣ್ತಿ ಯಾವಾಗಾರ ವಾಂತಿ ಮಾಡಕೊಂಡಾಳೇನು' ಅಂತ ಕೇಳಿದಳು. 'ಇಲ್ಲಂಗೆ' ಅಂದೆ. ಈ ಸಲ ಸ್ವಲ್ಪ ಸಿಟ್ಟಿಗೇರಿ 'ಹಂಗಾರ ಮುಂದಿನ ತಿಂಗಳ ಸುಣ್ಣ ಬಡಿಸಿಗೆವಂತಿ ತಯಾರಾಗು, ಅವತ್ತೇ ಬೀಜದ ಮನುಷ್ಯನ ಕೂಡ ಮಾತುಕತೆ ಆಗ್ಬೇಕು' ಅಂದಳು. ನನಿಗಿ ಸಾಕಾಗಿ ಹೋಗಿತ್ತು, 'ಆಯ್ತು ಬಿಡಮ್ಮ' ಅಂದೆ. ಮತ್ತೆ ತನ್ನಪಾಡಿಗೆ ತಾನು ಅಕ್ಕಿ ಕೇರುತ್ತಾ ಕುಳಿತಳು.

ನನ್ನವಳು ನನ್ನ ನೋಡುವ ರೀತಿ, ಅವಳು ತನ್ನ ಜೀವಮಾನದಲ್ಲಿ ಏನೋ ಕಳೆದುಕೊಂಡಿದ್ದಾಳೆ, ಅದು ನನ್ನಲ್ಲೇ ಇದೆ ಅನ್ನೋ ರೀತಿ ನೋಡುತ್ತಿದ್ದಳು. ನಮ್ಮ ಕುಟುಂಬ ಅವಳ ಪಾಲಿಗೆ ಜೈಲಾಗಿಬಿಟ್ಟಿತ್ತು. ನಿನ್ನೆ ರಾತ್ರಿ ಈ ಊರಿನಿಂದ ಪಾರುಮಾಡಿಬಿಡು ಸಾಕು, ಮುಂದಿನ ಜನ್ಮಕ್ಕಾಗುವಷ್ಟು ಪ್ರೀತಿ ಕೊಡುತ್ತೇನೆ ಅಂತ ಮಾತು ಕೊಟ್ಟಿದ್ದಳು. ಆಮೇಲೆ ಅವಳು ಉನ್ಮತ್ತಳಾಗಿ ನನ್ನ ಕೆಳದುಟಿಯನ್ನ ತನ್ನ ನಾಲಿಗೆಯಲಿ ಸವರಿ ಕೊನೆಗೆ ಗಟ್ಟಿಗೆ ಕಡಿಯುತ್ತಾ ಪ್ರೀತಿಯಿಂದ, 'ಮಲ್ಲಿ ನೀನು ಬೇಕು, ನಿನ್ನ ಪ್ರೀತಿ ಬೇಕು, ಆದ್ರೆ ನಿಮ್ಮೂರು, ನಿಮ್ಮ ಕುಟುಂಬ ಬೇಡ ಮಲ್ಲಿ' ಎನ್ನುತ್ತಾ ತನ್ನ ಎದೆಗೆ ನನ್ನ ತಲೆಯನ್ನಿಡಿದು ಒತ್ತಿಕೊಂಡಳು. ಅವಳ ಎದೆಬಡಿತ ಹೆಚ್ಚಾಗಿತ್ತು. ಅವಳು ಸುರಿಸಿದ ಕಣ್ಣೀರು ನನ್ನ ಸುಳಿಮೇಲೆ ಬಿದ್ದವು. ನಾನು ಅವಳು ದುಃಖದಲ್ಲಿ ಪಾಲಾಗಿದ್ದೆ. ಅಮ್ಮ ಅಕ್ಕಿಮರ ತೆಗೆದುಕೊಂಡು ಸೀರೆ ಜಾಡಿಸಿ ಎದ್ದುಹೋದಳು. ಎಲ್ಲರಿದ್ದರೂ ಮನೆಯಲ್ಲಿ ನಮ್ಮಿಬ್ಬರಿಗೆ ಒಂಟಿತನ, ಮತ್ತು ಭಯ ಆವರಿಸಿತ್ತು.

* * *

ಸುಮಾರು ವರ್ಷದ ಹಿಂದಿನ ಆಲದಮರ, ಅದರ ಸುತ್ತಲೂ ಕಟ್ಟಿದ ಕಟ್ಟೆಗೂ ಕೂಡ ಆಲದಮರದಷ್ಟೇ ವಯಸ್ಸಾಗಿತ್ತು. ಆ ಕಟ್ಟೆಯನ್ನು ಊರಲ್ಲಿ ಹಲವಾರು ಕಾರಣಗಳಿಗೆ ಬಳಸುತ್ತಿದ್ದರು. ಬ್ಯಾಸಿಗೆಯಲ್ಲಿ ಹುಲಿಮನೆ ಆಟವಾಡಲು, ದಣಿವಾರಿಸಿಕೊಳ್ಳಲು, ಮತ್ತು ಪಂಚಾಯಿತಿ ಸೇರಲು ಅನೇಕ ರೀತಿಯಲ್ಲಿ ಕಟ್ಟೆ ಬಳಕೆಯಾಗುತ್ತಿತ್ತು. ಊರಿನಲ್ಲಿ ಕ್ಷಣ ಕ್ಷಣದಲ್ಲಿ ಏನೇ ನಡೆಯಲಿ ಮೊದಲು ಆಲದಮರದ ಕಟ್ಟೆಗೆ ತಿಳಿದಿರುತ್ತದೆ. ಆದರೆ ಇದೇ ಕಟ್ಟೆಯಲ್ಲಿ ನನ್ನದೇ ಪಂಚಾಯಿತಿ ನಡೆಯುತ್ತೆ ಅಂತ ನಾನು ಎಣಿಸಿರಲಿಲ್ಲ. ಊರಲ್ಲಿ ನಾಳೆ ಯಾರದಾದ್ರೂ ನ್ಯಾಯಕ್ಕ ಬುಳತ್ತೆ, ಅಥವಾ ಹಡಕರ ಪಟ್ಟಿಯಾಗ ಸೇರತಾರ ಅಂದರ ಸಾಕು ಬೇಗ ಬೆಳಕರ್ಲೆಪ್ಪ ಅಂತ ಊರ್ಮಂದಿ ಕಾಯ್ತಿರತಾರ.